# ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ಜವಾನ ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ .

ಉಲ್ಲೇಖ:

1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011,ದಿನಾಂಕ: 06.05.2017.

2. ಗ್ರೂಪ್ "ಡಿ" ವೃಂದದಿಂದ ರಕ್ಷಕರು:ಅಡುಗೆಯವರು ವೃಂದಕ್ಕೆ ಮುಂಬಡ್ತಿ ಆದೇಶ ಸಂಖ್ಯೆ:ನಿಸಿಡಿ/ ರ/ಬಡ್ತಿ/25/2001-02 ದಿನಾಂಕ: 11.12.2001

3. ಗ್ರೂಪ್ "ಡಿ" ವೃಂದದಿಂದ ವಾಹನ ಚಾಲಕರ ವೃಂದಕ್ಕೆ ಮುಂಬಡ್ತಿ ಆದೇಶ ಸಂಖ್ಯೆ: ನಿಸಿಡಿ/ವಾಚಾ/ಬಡ್ತಿ/2001-02/26 ದಿನಾಂಕ: 13.12.2002

4 ಗ್ರೂಪ್ "ಡಿ" ವೃಂದದಿಂದ ವಾಹನ ಚಾಲಕರ ವೃಂದಕ್ಕೆ ಮುಂಬಡ್ತಿ ಆದೇಶ ಸಂಖ್ಯೆ: ನಿಸಿಡಿ/17/2004-05 ದಿನಾಂಕ: 27.09.2010

5. ಗ್ರೂಪ್ "ಡಿ" ವೃಂದದಿಂದ ದ್ವಿತೀಯ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ಆದೇಶ ಸಂಖ್ಯೆ:ನಿಸಿಡಿ/ ಗ್ರೂಪ್-ಡಿ/ಮು/62/2013-14 ದಿನಾಂಕ: 10.09.2015.

6. ಜವಾನ ವೃಂದದ ದಿನಾಂಕ 01.01.2006 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/ಜವಾನ-14/06-07,ದಿನಾಂಕ: 06.03.2007.

7. ಜವಾನ ವೃಂದದ ದಿನಾಂಕ 01.01.2013 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/6/ಜವಾನ/2013-14,ದಿನಾಂಕ: 22.09.2014.

8. ಜವಾನ ವೃಂದದ ದಿನಾಂಕ 01.01.2015 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ಜವಾನ/16/2015-16,ದಿನಾಂಕ: 21.07.2015.

9. ಜವಾನ ವೃಂದದ ದಿನಾಂಕ 01.01.2016 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ಜವಾನ/11/2016-17,ದಿನಾಂಕ: 07.12.2016.

ಪ್ರಸ್ತಾವನೆ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು **"Karnataka Determination of Seniority of Govt servants promoted on the basis of Reservation Act 2002"** ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಅಧಿಕಾರಾತೀತ (**ultra vires**) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ.